**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 481/2025**

| | | |
|---|---|---|
| ಹೆಸರು | ಶ್ರೀ ದೊಡ್ಡಸ್ವಾಮಿ | ಚಾಸಾಃ 01 |
| ತಂದೆ ಹೆಸರು | ಶ್ರೀ ರಂಗನಾಯಕ | ಫ್ರಾಸಾಃ 01 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ದಿನಾಂಕಃ 19.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಸಿ.ಇ.ಒ | |
| ವಾಸ | ಕೋಟೆಕೆರೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಕೋಟೆಕೆರೆ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಡೆಯುತ್ತಿದೆ. ದಿಃ 12.12.2001 ರಲ್ಲಿ ನೋಂದಣಿಯಾಗಿದೆ. ಸದರಿ ಕಟ್ಟಡವನ್ನು ಸೊಸೈಟಿಯ ಕಛೇರಿಗೆ ಪಡೆದೇವು. ಅದರ ವಿಸ್ತೀರ್ಣ 15x20 ಅಡಿ. ಸದರಿ ಜಾಗವನ್ನು ರೂ.15,750/– ಗಳಿಗೆ ರಾಮಚಂದ್ರರವರಿಂದ ಖರೀದಿ ಮಾಡಿದ್ದೇವೆ. ದಿಃ 26.01.2002 ರಲ್ಲಿ ಸದರಿ ಸೊಸೈಟಿಯನ್ನು ಉದ್ಘಾಟನೆ ಮಾಡಿದೇವು. ದಿಃ 19.03.2025 ರಂದು ಆರೋಪಿ 2 ರಿಂದ 4 ರವರ ಜೊತೆ ರಾಮಚಂದ್ರರವರು ನಮ್ಮ ಸಂಘದ ಬೀಗ ಹೊಡೆದು ಅಕ್ರಮವಾಗಿ ಪ್ರವೇಶ ಮಾಡಿದರು. ಸಂಜೆ 4.30 ಗಂಟೆಗೆ ನಾನು ಬಂದು ನೋಡಿದೆ. ನಾನು ಗ್ರಾಮಸ್ಥರನ್ನು ಕರೆದು ತೋರಿಸಿದೆ. ಆಡಳಿತ ಮಂಡಳಿ ಒಪ್ಪಿಗೆ ಮೇರೆಗೆ ನಾನು ದೂರು ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರ್ತಿಸಲಾಯಿತು. ನಂತರ ಪೊಲೀಸರು ಘಟನಾ ಸ್ಥಳದಲ್ಲಿ ಮಹಜರ್ ಮಾಡಿದರು. ಘಟನಾ ಸ್ಥಳವನ್ನು ನಾನು ತೋರಿಸಿದೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು

ಗುರ್ತಿಸಲಾಯಿತು. ಆ ಕಾಲಕ್ಕೆ ಬೀಗವನ್ನು ಅಮಾನತ್ತುಪಡಿಸಿಕೊಂಡರು. ಸಂಜೆ 4.30 ರಿಂದ 7.15 ರವರೆಗೆ ಮಹಜರ್ ಮಾಡಿದರು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು ಗುರುತಿಸಲಾಯಿತು. ಸಾಕ್ಷಿಯು ಬೀಗವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಿದ್ದು, ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 28.03.2025 ರಂದು ನಿಪಿ2 ರಂತೆ ಘಟನಾ ಸ್ಥಳದಲ್ಲಿ ಮಹಜರ್ ಮಾಡಿದರು ಎಂದರೆ ಸರಿ. ಸದರಿ ಮಹಜರ್ ನ್ನು ಸಂಜೆ 6.30 ರಿಂದ 7.15 ರವರೆಗೆ ಮಾಡಿದರು ಎಂದರೆ ಸರಿ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಗುಂಡ್ಲುಪೇಟೆ**